
ಅವಳು ಸಹಿಸುತ್ತಲೇ ಇರಲಿಲ್ಲ. ನನಗೆ ಪರಿಚಿತರಾದ ಹೆಂಗಸರಲ್ಲದೇ ನನ್ನ ಸ್ನೇಹಿತರು, ನನ್ನ ಬೆಕ್ಕು, ನನ್ನ ಪುಸ್ತಕಗಳ ಬಗ್ಗೆಯೂ ಹೊಟ್ಟೆಕಿಚ್ಚು ಅವಳಿಗೆ. ಒಂದು ದಿನ ನಾನು ಅಷ್ಟೊಂದು ಇಷ್ಟಪಡುತ್ತಿರಲಿಲ್ಲವೆಂಬ ಕಾರಣಕ್ಕಾಗಿ ನನ್ನಲ್ಲಿರುವ ಕೋಟುಗಳಲ್ಲಿ ಒಂದನ್ನು ನಾನಿಲ್ಲದಿರುವಾಗ ಯಾರಿಗೋ ಕೊಟ್ಟುಬಿಟ್ಟಿದ್ದಳು. ಆದರೆ, ನಾನು ಸ್ತಿಮಿತವುಳ್ಳ ಮನಃಸ್ಥಿತಿಯವನಾಗಿದ್ದೆ. ನನಗೆ ಅವಳು ಬೇಸರ ಹುಟ್ಟಿಸುತ್ತಿದ್ದಳು ಎಂಬುದನ್ನು ಅಲ್ಲಗಳೆಯಲಾರೆ; ಅವಳ ಕಠೋರ ಸ್ವಭಾವ, ದೇವರ ಸೃಷ್ಟಿ ಎಂದು ನಾನು ಒಪ್ಪಿಕೊಂಡುಬಿಟ್ಟಿದ್ದೆ. ಅವಳ ಈ ಸ್ವಭಾವದ ವಿರುದ್ಧ ಹೆಣಗಾಡುವುದಕ್ಕಿಂತ ಕೆಟ್ಟ ಹವಾಮಾನ ಮತ್ತು ಶೀತ–ತಲೆಭಾರ ಇತ್ಯಾದಿಗಳ ಬಗ್ಗೆ ಪರಿಹಾರ ಕಂಡುಕೊಳ್ಳುವುದು ಒಳ್ಳೆಯದೆಂದು ಸುಮ್ಮನಿರುತ್ತಿದ್ದೆ. ಅವಳು ಮಾಡುತ್ತಿದ್ದ ಆಪಾದನೆಗಳನ್ನು ಸಾಧ್ಯವಾದಷ್ಟೂ ಅಲ್ಲಗಳೆಯುತ್ತಿದ್ದೆ ಮತ್ತು ಅದು ಅಸಾಧ್ಯವೆನಿಸಿದಾಗ ನನ್ನ ಭುಜಗಳನ್ನು ಹಾರಿಸಿಬಿಡುತ್ತಿದ್ದೆ.

ಯಾವಾಗಲೂ ನನ್ನೊಂದಿಗೆ ಅವಳು ಜಗಳವಾಡಿ ಅನಗತ್ಯವಾಗಿ ಸೃಷ್ಟಿಸುತ್ತಿದ್ದ ದೃಶ್ಯಗಳು ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರುತ್ತಿರಲಿಲ್ಲ. ನನ್ನ ಪಾಡಿಗೆ ನನ್ನ ಜೀವನ ಸಾಗಿಸುತ್ತಿದ್ದೆ. ನನಗೆ ಆಶ್ಚರ್ಯವಾಗುತ್ತಿತ್ತು, ಅವಳದು ತೀವ್ರವ್ಯಾಮೋಹದ ಪ್ರೀತಿಯೇ ಅಥವಾ ಅತಿಯಾದ ದ್ವೇಷವೇ ಎಂಬುದು ತಿಳಿಯುತ್ತಿರಲಿಲ್ಲ. ಪ್ರೀತಿ ಮತ್ತು ದ್ವೇಷಕ್ಕೆ ಪರಸ್ಪರ ಹತ್ತಿರದ ನಂಟಿದೆಯೆಂದು ನನಗನಿಸುತ್ತಿತ್ತು.



ಒಂದು ರಾತ್ರಿ ಕುತೂಹಲಕರವಾದ ಸಂಗತಿಯೊಂದು ಘಟಿಸದಿದ್ದಲ್ಲಿ, ಬಹುಶಃ ನಾವು ಹೀಗೆಯೇ ಒಂದು ಅಧ್ಯಾಯದ ಕೊನೆಯ ಹಂತದವರೆಗೆ ಸಾಗುತ್ತಾ ಮುಂದೆ ಹೋಗುತ್ತಿದ್ದೆವೇನೋ. ಆ ರಾತ್ರಿ ನನ್ನ ಹೆಂಡತಿ ಇರಿತಕ್ಕೊಳಗಾದಂತೆ ಚೀತ್ಕಾರ ಮಾಡಿದಳು. ನಾನು ಬೆಚ್ಚಿಬಿದ್ದು, ಏನಾಯ್ತು ಎಂದು ಕೇಳಿದೆ. ಅವಳು ಹೇಳಿದಳು, ಒಂದು ಭಯಾನಕ ದುಃಸ್ವಪ್ನ ಕಂಡೆ ಎಂದು; ನಾನು ಅವಳನ್ನು ಕನಸಿನಲ್ಲಿ ಕೊಲ್ಲಲು ಪ್ರಯತ್ನಿಸುತ್ತಿದ್ದೆನಂತೆ. ನಾವು ದೊಡ್ಡ ಕಟ್ಟಡದ ತುಟ್ಟತುದಿಯ ಮಹಡಿಯಲ್ಲಿ ವಾಸಿಸುತ್ತಿದ್ದೆವು. ಮೆಟ್ಟಲುಗಳ ಕೆಳಭಾಗದ ವೃತ್ತಾಕಾರದ ಜಾಗವೂ ಸಾಕಷ್ಟು ವಿಶಾಲವಾಗಿಯೇ ಇತ್ತು. ನಾವು ಮಹಡಿ ತಲುಪುತ್ತಿದ್ದಂತೆ, ನಾನು ಅವಳನ್ನು ಹಿಡಿದೆಳೆದು ಮೆಟ್ಟಲಿನ ಕಟಾಂಜನದ ಮೇಲಿಂದ ಹೊರಗೆಸೆಯಲು ಪ್ರಯತ್ನಿಸಿದಂತೆ ಕನಸುಕಂಡಳಂತೆ. ಕೆಳಗಿನ ನೆಲ ಕಲ್ಲಿನದಾದ್ದರಿಂದ ಆರು ಅಂತಸ್ತುಗಳ ಮೇಲಿಂದ ತಳ್ಳಿದರೆ ಸಾವು ಖಂಡಿತ.

ಅವಳು ಭಯದಿಂದ ತತ್ತರಿಸಿಹೋಗಿದ್ದಳು. ಅವಳನ್ನು ಸಮಾಧಾನ ಮಾಡಲು ನನಗೆ ಸಾಧ್ಯವಾದಷ್ಟು ಪ್ರಯತ್ನ